TRUALT BIOENERGY LIMITED
(FORMERLY KNOWN AS TRUALT ENERGY LIMITED)
080 - 23255000 | 23255600
contact@trualtbioenergy.com
www.trualtbioenergy.com
GSTIN - 29AAICT5347A1ZB
CIN - L15400KA2021PLC145978

**Date: October 24, 2026.**

| To<br>**BSE Limited,**<br>Department of Corporate Services,<br>Phiroze Jeejeebhoy Towers<br>Dalal Street, Fort, Mumbai-400001<br><br>**Scrip Code**: **544545** | To<br>**National Stock Exchange of India Limited,**<br>The Listing Department<br>Exchange Plaza,<br>Bandra Kurla Complex,<br>Mumbai-400051<br>**Symbol: TRUALT** |
|---|---|

**Sub: Submission of Newspaper clipping under Regulation 30 and 47 of SEBI (Listing Obligations and Disclosure Requirements) Regulations, 2015.**

Dear Sir/Madam,

In compliance with Regulation 47 of SEBI (Listing Obligation and Disclosure Requirements) Regulations, 2015, we are enclosing herewith the copy of Newspaper Advertisement of Unaudited Financial Results (Standalone & Consolidated) for the quarter and half year ended on September 30, 2026, published today, i.e. October 24, 2026, in the following newspapers:

- Financial Express - English (All India editions)
- Vishwavani - Kannada

Further the aforementioned information will also be made available on the Company's website at www.trualtbioenergy.com

We request you to kindly take the above on record.

Yours faithfully,

**For TruAlt Bioenergy Limited**

VIJAYKUMAR NIRANI
Digitally signed by VIJAYKUMAR NIRANI
Date: 2026.10.24 15:00:54 +05'30'

**Vijaykumar Murugesh Nirani**
**Managing Director.**
**DIN:07413777**

Encl.: As above.

FM WANTS FSDC TO MEET MORE FREQUENTLY

# Digital upgrade of financial sector to onboard NRIs, FPIs

FE BUREAU
New Delhi, October 23

THE FINANCIAL STABILITY and Development Council (FSDC) on Friday reviewed India's macro-financial stability amid rising geopolitical uncertainties and deliberated on measures to strengthen domestic investment, enhance capital flows and deepen financial sector reforms.

The Council recognised the need for proactive efforts to mitigate potential risks to financial stability while adopting adequate safeguards for the financial system's resilience. According to an official statement, the members also decided to strengthen inter-regulatory coordination for a broader financial sector. The Council that comprises all financial sector regulators also emphasised simplifying and digitising know-your-customer (KYC) processes and enabling digital onboarding for non-resident Indians (NRIs) and foreign portfolio investors (FPIs).

Given rising geopolitical headwinds and global uncertainty, Finance Minister Nirmala Sitharaman urged the Council to hold FSDC meetings at more frequent intervals with a predefined schedule.

The FSDC, chaired by the Union Finance Minister, meets periodically as required to review macro-financial stability and regulatory coordination. Its 30th meeting, held on Friday, came nearly a year and a half after the 29th meeting held on June 10, 2025.

"The FSDC took cognizance of the emerging trends from the domestic and global macro-financial situation and stressed the need to be vigilant especially in view of the ongoing geopolitical uncertainties, AI boom and steep rise in global bond yields," the finance ministry said.

The FSDC discussed ways to promote innovation and digital modernisation in the financial sector, including measures to encourage fintech development.

It reviewed strategies to implement previous decisions and budget announcements such as strengthening the domestic investment ecosystem and improving the flow of resources for investment.

## STABILITY MEASURES




- FSDC stressed proactive measures to mitigate financial stability risks and strengthen systemic resilience
- Members called for greater coordination among financial sector regulators

# Crude imports jump over 16% in September

INDIA'S CRUDE OIL imports rose more than 16% in September from the previous month to 22.26 million metric tonne, government data showed on Friday. On an annual basis, crude oil imports were up 9% from 20.35 million tonne in September last year, data from the Petroleum Planning and Analysis Cell showed. Imports of oil products fell 0.8% in September from August, but were down about 40% from a year earlier. Product exports were up more than 6% to 5.22 million tonne annually.



Russian oil imports in September declined 13.7% from August to about 1.8 million barrels per day, accounting for about a third of overall purchases, data obtained from trade sources showed on Thursday.

India's fuel consumption in September rose 3.9% from August to 19.26 million metric tonne, according to data from earlier this month.

—REUTERS

भारतीय प्रौद्योगिकी संस्थान रोपड़
INDIAN INSTITUTE OF TECHNOLOGY ROPAR
RUPNAGAR, PUNJAB-140001
Tel: 01181- 231140, E-mail: recruitment@iitrpr.ac.in

Advertisement No. 03/2026
RECRUITMENT FOR THE POST OF REGISTRAR

Applications are invited from eligible Indian Citizens for the post of Registrar to be filled on Direct recruitment, which on Deputation/ Transfer on Deputation/on contract/Tenure basis. The last date for submission of applications will be **05 November, 2026.**

Detailed advertisement and application form is available at Institute website - **www.iitrpr.ac.in**

**Note:** The applicants who had applied earlier for the above post against Institute advertisement No. 01/2024 need not to apply again. Their applications will be considered as such. However they may send fresh applications, if interested with updated information.

DEAN (FA&A)

TRUALT BIOENERGY

TRUALT BIOENERGY LIMITED

*One of India's Largest Biofuels Producers*

**Registered Address:** Survey No. 166, Kulali Cross, Jamkhandi Mudhol Road, Bagalkot, Karnataka, India - 587313
**Corporate Address:** Unit No. N-1501, 15th Floor, World Trade Centre, Brigade Gateway Campus, Rajajinagar, Bangalore - 560055
**Tel:** +91 80 2325 5000 | **Email:** ir@trualtbioenergy.com | **Website:** www.trualtbioenergy.com

**Corporate Identity Number: L15400KA2021PLC145978**



STATEMENT OF UNAUDITED FINANCIAL RESULTS AND LIMITED REVIEW REPORT (STANDALONE AND CONSOLIDATED) FOR THE QUARTER AND HALF YEAR ENDED SEPTEMBER 30, 2026

The Board of Directors of the Company, at the meeting held on Friday, October 23, 2026, approved the Unaudited Financial Results (Standalone and Consolidated) and Limited Review Report of the Company for the Quarter and Half year ended on September 30, 2026 ("Financial Results")

The Financial Results along with Limited Review Report has been hosted on the Company website at www.trualtbioenergy.com/investor-relations and can be accessed by scanning the QR code below

For and on behalf of the Board of Directors
TruAlt Bioenergy Limited
Sd/-
**Vijaykumar Murugesh Nirani**
**Managing Director**
**(DIN: 07413777)**

Date : October 23, 2026
Place : Bangalore

(*) Source: CRISIL Report

# India eyes higher missile production

MUKESH JAGOTA
New Delhi, October 23

INDIA PLANS TO expand domestic production of conventional missiles, drones and other defence equipment to meet the demands of future warfare, while seeking a larger role for Indian manufacturers in global supply chains, Defence Secretary Rajesh Kumar Singh said on Friday.

The government is opening up missile technologies developed by the Defence Research and Development Organisation (DRDO) to private manufacturers through technology transfers, with around 17 large private and public sector players having taken up, or being in the process of taking up, these technologies, Singh said.

The government is also seeking to bridge the gap between prototype development and commercial-scale manufacturing by defence startups through a new procurement framework that envisages five years of assured orders for successful prototypes developed against requirements specified by the armed forces. The value of contracts generated through the initiative stands at around ₹2,000 crore, he said at the KPMG's Agarsar Bharat Manch.

India's defence exports have reached a record ₹38,424 crore, or about €3.6 billion, while domestic defence production has risen to nearly ₹1.78 lakh crore, Singh said.

> RAJESH KUMAR SINGH, DEFENCE SECRETARY
> We have become the third-largest exporter of arms to Europe, mainly because of artillery exports



The country now exports defence equipment to more than 80 countries.

"We have become the third-largest exporter of arms to Europe, mainly because of the artillery exports and other equipment. BrahMos supersonic has a lot of interest and a lot of buyers, particularly in Southeast Asia, who've either signed contracts or are in the process of negotiation.

Singh cautioned that the current boom in arms procurement, driven by geopolitical tensions and a rise in active conflicts, should not be extrapolated indefinitely.

# Govt curbs reuse of medical devices

MANU KAUSHIK
New Delhi, October 23

THE GOVERNMENT HAS cracked down on the reuse of single-use medical devices and disposable surgical items in public and private healthcare facilities, citing patient safety risks.

In a directive, the Directorate General of Health Services (DGHS) asked states and union territories, the drug controller general of India (DCGI) and the central government health scheme (CGHS) to ensure compliance with the prohibition on reusing these devices. Authorities have also been asked to inspect healthcare facilities, monitor compliance and take action against violations under applicable laws.



The DGHS observed that some private and corporate hospitals were reusing these items, particularly in cardiology, nephrology, oncology, cardiothoracic and vascular surgery, and neurosurgery.

The DGHS also noted that patients were sometimes charged the full cost of these items even when they had been reused.

The DGHS said reuse raised concerns over "patient safety, infection prevention and control, regulatory compliance, and healthcare expenditure". It said such practices may violate the Drugs and Cosmetics Act, 1940, Medical Devices Rules, 2017, and Clinical Establishments Act, 2010, as well as applicable infection control protocols and biomedical waste management provisions.

The industry said devices designed for one-time use are not meant to be cleaned, sterilised and used again, as reuse can expose patients to infections, device failure and other complications. It cited published Indian studies showing that catheters and dialysers are widely reused, often without a national policy governing the practice.






Scanned with OKEN Scanner

## ಸಮಾಚಾರ ಸಣ್ಣದಲ್ಲ

### ಇಂದು ಸಂಗೀತಾ ರಾಜೀವ್ ಭರತನಾಟ್ಯ ರಂಗ ಪ್ರವೇಶ



**ಬೆಂಗಳೂರು:** ಉದಯೋನ್ಮುಖ ಭರತನಾಟ್ಯ ಕಲಾವಿದೆ ಸಂಗೀತಾ ರಾಜೀವ್ ಅವರ ರಂಗಪ್ರವೇಶ ಕಾರ್ಯಕ್ರಮ ಅ.24ರ ಶನಿವಾರ ನಗರದ ಮೀನಾಕ್ಷಿ ರಂಗಮಂಚ ಆಡಿಟೋರಿಯಂನಲ್ಲಿ ಜರುಗಲಿದೆ. ರಾಜರಾಜೇಶ್ವರಿನಗರದ ನಾಗಶ್ರೀ ಮತ್ತು ರಾಜೀವ್ ದಂಪತಿಯ ಪುತ್ರಿ, ಸಂಗೀತಾ ಅವರು ವಿದುಷಿ ಶುಭಾ ಬಾಲಸುಬ್ರಹ್ಮಣ್ಯ ಅವರಲ್ಲಿ ಭರತನಾಟ್ಯ ಅಭ್ಯಾಸ ಮಾಡಿದ್ದಾರೆ. ಆದ್ಯ ಆರ್ಟ್ ಫೌಂಡೇಶನ್ ಸಹಯೋಗದಲ್ಲಿ ಕನಕಪುರ ರಸ್ತೆಯ ದೊಡ್ಡಕಲ್ಲಸಂದ್ರದ ಮೀನಾಕ್ಷಿ ಸಭಾಂಗಣದಲ್ಲಿ ಬೆಳಿಗ್ಗೆ 10.30ಕ್ಕೆ ಕಾರ್ಯಕ್ರಮ ಆಯೋಜಿಸಲಾಗಿದೆ. ಭರತಾಂಜಲಿ ನಾಟ್ಯಶಾಲೆಯ ಕಲಾವಿದೆ ಸೀತಾ ಗುರುಪ್ರಸಾದ್ ಹಾಗೂ ಆಕಾಶವಾಣಿ ನಿವೃತ್ತ ಅಧಿಕಾರಿ ಡಾ.ಎಂ.ಎಸ್. ವಿಜಯ ಹರನ್ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿವಿಧ ನೇಮಕಾತಿ: ಪರೀಕ್ಷೆಗೆ ಕೆಇಎ ಬಿಗಿ ಕ್ರಮ

**ಬೆಂಗಳೂರು:** ಕಲ್ಯಾಣ ಕರ್ನಾಟಕ ವೃಂದದ ಭೂಮಾಪಕ, ಗ್ರಾಮ ಆಡಳಿತಾಧಿಕಾರಿ ಮತ್ತು ವಸತಿ ಶಾಲೆಗಳ ಶಿಕ್ಷಕರ ಹುದ್ದೆಗಳಿಗೆ ಅ.24 ಮತ್ತು 25 ಹಾಗೂ ಉಳಿಕೆ ಮೂಲ ವೃಂದದ ಇಎಸ್ಐ-ನರ್ಸಿಂಗ್ ಅಧಿಕಾರಿ, ಫಾರ್ಮಸಿ ಅಧಿಕಾರಿ ಸೇರಿದಂತೆ ಇತರ ಹುದ್ದೆಗಳ ಪರೀಕ್ಷೆ ಅ.26 ಮತ್ತು 27ರಂದು ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಕಲ ಸಿದ್ಧತೆ ಮಾಡಿಕೊಂಡಿದೆ. ಇತರ ಎಲ್ಲ ನೇಮಕಾತಿ ಪರೀಕ್ಷೆಗಳಿಗೆ ಇರುವ ಹಾಗೆ ಈ ಪರೀಕ್ಷೆಗಳಿಗೂ ಬಿಗಿ ಕ್ರಮ ಕೈಗೊಳ್ಳಲಾಗಿದೆ. ಕಲ್ಯಾಣ ಕರ್ನಾಟಕ ವೃಂದದ ಪರೀಕ್ಷೆ ಬೆಂಗಳೂರು ಸೇರಿದಂತೆ ಎಂಟು ಜಿಲ್ಲೆಗಳಲ್ಲಿ ಒಟ್ಟು 237 ಕೇಂದ್ರಗಳಲ್ಲಿ ನಡೆಯಲಿವೆ. ಎಲ್ಲ ವಿವಿಧ ಪರೀಕ್ಷೆಗಳಿಗೂ ಸೇರಿ ಒಟ್ಟು 89,265 ಮಂದಿ ಪರೀಕ್ಷೆ ಬರೆಯಲಿದ್ದಾರೆ. ಅ.26 ಮತ್ತು ಅ.27ರಂದು ನಡೆಯುವ ಉಳಿಕೆ ಮೂಲ ವೃಂದದ ಪರೀಕ್ಷೆ ಬೆಂಗಳೂರು ಸೇರಿದಂತೆ 9 ಜಿಲ್ಲೆಗಳಲ್ಲಿ ಒಟ್ಟು 119 ಕೇಂದ್ರಗಳಲ್ಲಿ ನಡೆಸಲಾಗುತ್ತದೆ. ಎಲ್ಲ ಪರೀಕ್ಷೆಗೂ ಸೇರಿದಂತೆ ಒಟ್ಟು 48,767 ಮಂದಿ ಪರೀಕ್ಷೆ ಬರೆಯಲಿದ್ದಾರೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

## ಫನ್‌ತರಂಗ

– ರಘುಪತಿ ಶೃಂಗೇರಿ –

**SIR ವಿರುದ್ಧ ಪ್ರತಿಭಟನೆ: ಕಾಕ್ರೋಚ್ ಜೊತೆ ಕೈ ಜೋಡಿಸಿದ ಕೇಂದ್ರ ವಿತ್ತ ಸಚಿವೆಯ ಪತಿ.**

ಸುದ್ದಿ




**ವಿರಾಮ**
ಪ್ರತಿ ಭಾನುವಾರ

---

ವೇಮಗಲ್‌ನಲ್ಲಿ 80 ಕೋಟಿ ಹೂಡಿಕೆ ಪ್ರಸ್ತಾವನೆ | ಸಾವಿರ ಉದ್ಯೋಗ ಸೃಷ್ಟಿಯ ನಿರೀಕ್ಷೆ: ಮುಖ್ಯಮಂತ್ರಿ ಡಿಕೆಶಿ

# ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್: ಪೋಲೆಂಡ್ ಪಿಎಂಗೆ ಆಹ್ವಾನ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಕರ್ನಾಟಕದ 'ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್ 2027'ರಲ್ಲಿ ಪೋಲೆಂಡ್ ದೇಶವನ್ನು ಪಾಲುದಾರ ರಾಷ್ಟ್ರವಾಗಿ ಭಾಗವಹಿಸಲು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಆಹ್ವಾನಿಸಿದರು. ಇದೇ ವೇಳೆ ಪೋಲೆಂಡಿನ ಸಂಸ್ಥೆಯೊಂದು 80 ಕೋಟಿ ಹೂಡಿಕೆಯನ್ನು ಪ್ರಸ್ತಾಪಿಸಿದ್ದು, ಇದರಿಂದ ಕರ್ನಾಟಕದಲ್ಲಿ ಸುಮಾರು 1,000 ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ತಿಳಿಸಿದರು.

ಖಾಸಗಿ ಹೋಟೆಲ್‌ನಲ್ಲಿ ಭಾರತ-ಪೋಲೆಂಡ್ ಬಿಸಿನೆಸ್ ಮೀಟಿಂಗ್‌ನಲ್ಲಿ ಭಾಗವಹಿಸಿ, ಪೋಲೆಂಡ್ ಪ್ರಧಾನಿ ಡೊನಾಲ್ಡ್ ಟಸ್ಕ್ ನಿಯೋಗದೊಂದಿಗೆ ಚರ್ಚಿಸಿದ ಬಳಿಕ ಮಾತನಾಡಿದ ಅವರು, ಬೆಂಗಳೂರಿನ ತಂತ್ರಜ್ಞಾನ ಪರಿಸರ ವ್ಯವಸ್ಥೆ ಮತ್ತು ಸುಧಾರಿತ ಉತ್ಪಾದನೆ, ಎಐ ಹಾಗೂ ಹಸಿರು ಇಂಧನದಲ್ಲಿ ಪೋಲೆಂಡಿನ ಪರಿಣತಿಯನ್ನು ಬಳಸಿಕೊಂಡು ಹೂಡಿಕೆ, ತಂತ್ರಜ್ಞಾನ, ನಾವೀನ್ಯತೆ ಮತ್ತು ಉದ್ಯೋಗ ಸೃಷ್ಟಿಯಲ್ಲಿ ದ್ವಿಪಕ್ಷೀಯ ಸಹಕಾರವನ್ನು ಆಳವಾಗಿಸಲು ರಾಜ್ಯವು ಉತ್ಸುಕವಾಗಿದೆ ಎಂದು ಹೇಳಿದರು.

ಕೋಲಾರ ಜಿಲ್ಲೆಯ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಐದು ಎಕರೆ ಪ್ರದೇಶದಲ್ಲಿ ಸುಮಾರು 80 ಕೋಟಿ ಮೊತ್ತದ ಪ್ರಸ್ತಾವಿತ ಹೂಡಿಕೆಯನ್ನು ಸ್ವಾಗತಿಸಿದರು. ಈ ಯೋಜನೆಯು ಸುಮಾರು 1,000 ಉದ್ಯೋಗಗಳನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದೆ ಮತ್ತು ಭಾರತದಲ್ಲಿ ಇದೇ ಮೊದಲ ಬಾರಿಗೆ 'ಸ್ಮಾರ್ಟ್ ಅಡಲ್ಟ್ ಇನ್ಕಾಂಟಿನೆನ್ಸ್ ಪ್ಯಾಡ್‌ಗಳ ತಯಾರಿಕೆಯನ್ನು ಪರಿಚಯಿಸಲಿದೆ.

ಕರ್ನಾಟಕದಲ್ಲಿ ಹೆಚ್ಚಿನ ಪೋಲಿಷ್ ಹೂಡಿಕೆಗೆ, ವಿಶೇಷವಾಗಿ ವೈದ್ಯಕೀಯ ಉತ್ಪನ್ನಗಳು, ಆರೋಗ್ಯ ರಕ್ಷಣೆ ಮತ್ತು ಸುಧಾರಿತ ಉತ್ಪಾದನಾ ವಲಯಗಳಲ್ಲಿ ಸಾಕಷ್ಟು ಅವಕಾಶಗಳಿವೆ. ಹೊಸ ತಂತ್ರಜ್ಞಾನಗಳನ್ನು ತರುವ, ಸ್ಥಳೀಯ ಉದ್ಯಮಗಳನ್ನು ಬಲಪಡಿಸುವ, ಗುಣಮಟ್ಟದ ಉದ್ಯೋಗಗಳನ್ನು ಸೃಷ್ಟಿಸುವ ಮತ್ತು ರಫ್ತಿಗೆ ಬೆಂಬಲ ನೀಡುವ ಹೂಡಿಕೆಗಳನ್ನು ಆಕರ್ಷಿಸಲು ರಾಜ್ಯವು ಉತ್ಸುಕವಾಗಿದೆ ಎಂದರು.

ಕೃತಕ ಬುದ್ಧಿಮತ್ತೆ, ಗೇಮಿಂಗ್ ಮತ್ತು ಡಿಪ್-ಟೆಕ್ ನಾವೀನ್ಯತೆಗಳಲ್ಲಿ ಸಹಯೋಗವನ್ನು ಉತ್ತೇಜಿಸಲು ಕಟೋವಿಸ್ ಮತ್ತು ಕಟೋ.ಹಬ್‌ನ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಯೊಂದಿಗೆ ಸಹಿ ಮಾಡಲಾದ ಒಪ್ಪಂದ ಪತ್ರವನ್ನು ಉಲ್ಲೇಖಿಸಿದರು. ಇದರಲ್ಲಿ ಪ್ರಸ್ತಾವಿತ 'ಕರ್ನಾಟಕ-ಕಟೋವಿಸ್ ಡಿಜಿಟಲ್ ಮತ್ತು ಗೇಮಿಂಗ್ ಕಾರಿಡಾರ್' ಸಹ ಸೇರಿದೆ. ಈ ಉಪಕ್ರಮವು ಉಭಯ ಕಡೆಯ ಸ್ಟಾರ್ಟ್‌ಅಪ್ಗಳು, ತಂತ್ರಜ್ಞಾನ ಕಂಪನಿಗಳು ಮತ್ತು ಸಂಶೋಧನಾ ಸಂಸ್ಥೆಗಳಿಗೆ ಸಹಯೋಗ ನೀಡಲು, ಹೊಸ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಮತ್ತು ಪರಸ್ಪರ ಮಾರುಕಟ್ಟೆಗಳಿಗೆ ವಿಸ್ತರಿಸಲು ಅವಕಾಶಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ ಎಂದರು.




ಬೆಂಗಳೂರಿಗೆ ಆಗಮಿಸಿದ ಪೋಲೆಂಡ್ ಪ್ರಧಾನಿ ಡೊನಾಲ್ಡ್ ಟಸ್ಕ್ ನಿಯೋಗದ ಜತೆ ಹೂಡಿಕೆ ಕುರಿತು ಸಿಎಂ ಡಿ.ಕೆ.ಶಿವಕುಮಾರ್ ನಗರದ ಖಾಸಗಿ ಹೋಟೆಲ್‌ನಲ್ಲಿ ಚರ್ಚೆ ನಡೆಸಿದರು. ಈ ವೇಳೆ ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಇದ್ದರು.

> ಕರ್ನಾಟಕದಂತೆಯೇ ಪೋಲೆಂಡ್ ಕೂಡ ಕಿರಿಯ ವಯಸ್ಸಿನ ಕೆಲಸಗಾರರನ್ನು ಹೊಂದಿದ್ದು, ಕರ್ನಾಟಕ ಮತ್ತು ಪೋಲೆಂಡ್ ನಡುವಿನ ಸಹಕಾರವು ಎರಡೂ ಕಡೆಯವರಿಗೆ ಪರಸ್ಪರ ಪ್ರಯೋಜನಕಾರಿಯಾಗಲಿದೆ. ಬೆಂಗಳೂರಿನಲ್ಲಿ ಪೋಲಿಷ್ ಹೂಡಿಕೆಗಳನ್ನು ಉತ್ತೇಜಿಸುವ ಮೂಲಕ ಮತ್ತು ಪೋಲೆಂಡ್‌ನಲ್ಲಿ ಅವಕಾಶಗಳನ್ನು ಹುಡುಕುತ್ತಿರುವ ಕರ್ನಾಟಕದ ಕಂಪನಿಗಳಿಗೆ ಬೆಂಬಲ ನೀಡುವ ಮೂಲಕ ಈ ವ್ಯವಹಾರ ಸಂಬಂಧಗಳನ್ನು ಬಲಪಡಿಸಲಿದೆ.
> -ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

- ಪೋಲೆಂಡ್ ಪ್ರಧಾನಿ ಡೊನಾಲ್ಡ್ ಟಸ್ಕ್ ನಿಯೋಗದೊಂದಿಗೆ ಸಿಎಂ ಡಿಕೆಶಿ ಚರ್ಚೆ
- ವೈದ್ಯಕೀಯ ಉತ್ಪನ್ನ, ಸುಧಾರಿತ ಉತ್ಪಾದನಾ ವಲಯಗಳಲ್ಲಿ ಹೂಡಿಕೆ ಮಾತುಕತೆ

### 2ನೇ ಬಾರಿ ಆಗಮನ: ಸಿಎಂ ಡಿಕೆ ಶಿವಕುಮಾರ್‌ಗೆ ಖುಷಿ

ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ಪೋಲೆಂಡ್ ಪ್ರಧಾನಮಂತ್ರಿಗಳು ಎರಡನೇ ಬಾರಿಗೆ ನಮ್ಮ ರಾಜ್ಯಕ್ಕೆ ಆಗಮಿಸುತ್ತಿದ್ದಾರೆ. ಇದು ನಮ್ಮ ರಾಜ್ಯದ ಉದ್ಯಮಿಗಳು ಹಾಗೂ ಯುವ ನಾಯಕರಿಗೆ ಹೆಮ್ಮೆಯ ವಿಚಾರ. ವ್ಯಾಪಾರಕ್ಕೆ ಇಲ್ಲಿರುವ ಅವಕಾಶಗಳಿಗಾಗಿ ಅವರು ಬಂದಿದ್ದಾರೆ. ಅವರ ಕೈಗಾರಿಕೋದ್ಯಮಿಗಳನ್ನು ಭೇಟಿ ಮಾಡಿ ಚರ್ಚೆ ನಡೆಸಲಾಗಿದೆ. ಇದಕ್ಕಾಗಿ ನಾನು ದೆಹಲಿಯಿಂದ ವಾಪಸ್ಸಾಗಿರುವೆ. ಇಲ್ಲಿ ಉದ್ಯಮ ಸ್ಥಾಪನೆಗಾಗಿ ಅವರಿಗೆ ಆಹ್ವಾನ ನೀಡಿದ್ದೇವೆ. ಪೋಲೆಂಡಿನ ಕಂಪನಿಗಳು ಇಲ್ಲಿ ಕೆಲಸ ಮಾಡಲು ಸಿದ್ಧರಾಗಿದ್ದಾರೆ. ಕರ್ನಾಟಕ ಹಾಗೂ ಬೆಂಗಳೂರಿಗೆ ವಿದೇಶದ ನಾಯಕರು ಬರುತ್ತಿರುವುದು ನಮ್ಮ ರಾಜ್ಯ ಹೇಗೆ ಪ್ರಗತಿಯ ಹಾದಿಯಲ್ಲಿ ಸಾಗುತ್ತಿದೆ ಎಂಬುದಕ್ಕೆ ಸಾಕ್ಷಿ ಎಂದರು.

---

## ಎಸ್‌ಬಿಐ ಲೈಫ್‌ನಿಂದ ವಿಮೆ ಕಂತು ಪಾವತಿ ವಿನಾಯಿತಿ

SBI Life - Waiver of Premium Rider
UIN: 111B048V01
25 YEARS Protecting Lives, Securing Future
SBI Life
Apne liye. Apno ke liye.

**ಬೆಂಗಳೂರು:** ಗಂಭೀರ ಕಾಯಿಲೆ, ಅಂಗವೈಕಲ್ಯ ಸೇರಿದಂತೆ ಅನಿರೀಕ್ಷಿತ ಸವಾಲುಗಳು ಎದುರಾದಾಗಲೂ ಗ್ರಾಹಕರ ದೀರ್ಘಕಾಲೀನ ಹಣಕಾಸು ಯೋಜನೆಗಳಿಗೆ ಅಡ್ಡಿಯಾಗದಂತೆ ನೆರವಾಗಲು ಎಸ್‌ಬಿಐ ಲೈಫ್ ಇನ್ಶೂರನ್ಸ್ ವಿಮೆ ಕಂತು ಪಾವತಿ ವಿನಾಯಿತಿ (ವೇವರ್ ಆಫ್ ಪ್ರೀಮಿಯಂ) ಸೌಲಭ್ಯ ಪರಿಚಯಿಸಿದೆ.

ಈ ಕುರಿತು ಎಸ್‌ಬಿಐ ಲೈಫ್ ಇನ್ಶೂರನ್ಸ್ ಅಧ್ಯಕ್ಷ ಎಂ. ಆನಂದ್, ಅನಿರೀಕ್ಷಿತ ಸಂದರ್ಭಗಳಲ್ಲಿಯೂ ಗ್ರಾಹಕರ ದೀರ್ಘಕಾಲೀನ ಹಣಕಾಸು ಬದ್ಧತೆಗಳು ನಿರಂತರವಾಗಿ ಮುಂದುವರಿಯುವಂತೆ ನೆರವಾಗುವುದು ಈ ಸೌಲಭ್ಯದ ಉದ್ದೇಶವಾಗಿದೆ. ಗ್ರಾಹಕರ ಹಣಕಾಸು ಗುರಿಗಳಿಗೆ ಹೆಚ್ಚುವರಿ ಸುರಕ್ಷತೆ ಒದಗಿಸುವ ಮೂಲಕ, ಬದಲಾಗುವ ಪರಿಸ್ಥಿತಿಗಳಲ್ಲಿಯೂ ಕುಟುಂಬಗಳು ತಮ್ಮ ಭವಿಷ್ಯದ ಯೋಜನೆ ವಿಶ್ವಾಸದಿಂದ ಮುಂದುವರಿಸಲು ಈ ಸೌಲಭ್ಯ ಸಹಕಾರಿಯಾಗಲಿದೆ. ಈ ಸೌಲಭ್ಯದಡಿ, ಪಾಲಿಸಿಯ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ಸಂದರ್ಭ ಎದುರಾದಾಗ ಭವಿಷ್ಯದಲ್ಲಿ ಪಾವತಿಸಬೇಕಾದ ವಿಮೆ ಕಂತುಗಳು ಹಾಗೂ ಹೆಚ್ಚುವರಿ ಕಂತುಗಳ ಪಾವತಿಯಿಂದ ವಿನಾಯಿತಿ ದೊರೆಯಲಿದೆ. ಇದರಿಂದ ನಿಗದಿತ ಷರತ್ತುಗಳಿಗೆ ಒಳಪಟ್ಟು ಮೂಲ ವಿಮಾ ಪಾಲಿಸಿ ಮತ್ತು ಅದರೊಂದಿಗೆ ಜೋಡಿಸಲಾದ ಹೆಚ್ಚುವರಿ ಸೌಲಭ್ಯ ಮುಂದುವರಿಯಲಿವೆ ಎಂದರು.

ಮಕ್ಕಳ ಉನ್ನತ ಶಿಕ್ಷಣ, ನಿವೃತ್ತಿ ಜೀವನದ ಸಿದ್ಧತೆ ಹಾಗೂ ಕುಟುಂಬದ ಆರ್ಥಿಕ ಭದ್ರತೆ ಸೇರಿದಂತೆ ಹಲವು ಉದ್ದೇಶಗಳಿಗಾಗಿ ಜನರು ದೀರ್ಘಕಾಲೀನ ಹಣಕಾಸು ಯೋಜನೆ ರೂಪಿಸಿಕೊಳ್ಳುತ್ತಾರೆ. ಆದರೆ, ಅನಿರೀಕ್ಷಿತ ಆರೋಗ್ಯ ಸಮಸ್ಯೆ ಅಥವಾ ಅಂಗವೈಕಲ್ಯದಂತಹ ಸಂದರ್ಭ ಎದುರಾದಾಗ ವಿಮೆ ಕಂತು ಪಾವತಿಸುವ ಸಾಮರ್ಥ್ಯಕ್ಕೆ ಧಕ್ಕೆಯಾಗಬಹುದು. ಇಂತಹ ಸಂದರ್ಭಗಳಲ್ಲಿ ವಿಮಾ ರಕ್ಷಣೆ ಮುಂದುವರಿಸಲು ಈ ಸೌಲಭ್ಯ ನೆರವಾಗಲಿದೆ ಎಂದರು.



ನಗರದ ದೊಡ್ಡಬಸ್ತಿ ಮುಖ್ಯರಸ್ತೆಯ ಸೋಣ್ಣೇನಹಳ್ಳಿ ಬಸ್ ನಿಲ್ದಾಣದ ಬಳಿ ಅಪರಿಚಿತರು ಕಸ ಸುರಿದು ಹೋಗಿರುವ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿದ್ದು ಹೀಗೆ...

(ಚಿತ್ರ: ಸುಧಾಕರ್ ದೇವರಾಜ್)

## ಅ.27ರಂದು ಅಂತಿಮ ಮತದಾರರ ಪಟ್ಟಿ ಪ್ರಕಟ

**ಬೆಂಗಳೂರು:** ಎಸ್‌ಐಆರ್ ಪ್ರಕ್ರಿಯೆಯ ಪ್ರಮುಖ ಹಂತಗಳು ಪೂರ್ಣಗೊಂಡಿದ್ದು, ಅಕ್ಟೋಬರ್ 27ರಂದು ಅಂತಿಮ ಮತದಾರರ ಪಟ್ಟಿ ಪ್ರಕಟವಾಗಲಿದೆ. ರಾಜ್ಯದ ಪ್ರತಿಯೊಬ್ಬ ಮತದಾರನಿಗೂ ಮನೆಯಿಂದ ಗರಿಷ್ಠ ಎರಡು ಕಿ.ಮೀ. ವ್ಯಾಪ್ತಿಯಲ್ಲಿ ಮತಗಟ್ಟೆ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಮತಗಟ್ಟೆಗಳ ಸಂಖ್ಯೆ ಹೆಚ್ಚಿಸಲಾಗಿದೆ ಎಂದು ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ತಿಳಿಸಿದೆ.

ಜೂನ್ 16ರಂದು ಎಸ್‌ಐಆರ್ ಪ್ರಕ್ರಿಯೆ ಆರಂಭವಾದಾಗ ರಾಜ್ಯದಲ್ಲಿ 59,050 ಮತಗಟ್ಟೆಗಳಿದ್ದವು. ಪ್ರತಿ ಮತಗಟ್ಟೆಗೆ ಒಬ್ಬರಂತೆ ಬೂತ್ ಮಟ್ಟದ ಅಧಿಕಾರಿಗಳನ್ನು ನಿಯೋಜಿಸಲಾಗಿತ್ತು. ಮತದಾರರ ಅನುಕೂಲ ಮತ್ತು ಮತದಾನ ಪ್ರಕ್ರಿಯೆಯ ಸುಗಮ ನಿರ್ವಹಣೆಯ ದೃಷ್ಟಿಯಿಂದ ಆ. 17ರಂದು ನಡೆಸಿದ ತರ್ಕಬದ್ಧ ಮರುಹಂಚಿಕೆ ಪ್ರಕ್ರಿಯೆಯಲ್ಲಿ ಪ್ರತಿ ಮತಗಟ್ಟೆಗೆ ಗರಿಷ್ಠ 1,200 ಮತದಾರರನ್ನು ನಿಗದಿಪಡಿಸಲಾಯಿತು. ಇದರಿಂದ ರಾಜ್ಯದಲ್ಲಿ ಮತಗಟ್ಟೆಗಳು ಹಾಗೂ ಬಿಎಲ್‌ಒಗಳ ಸಂಖ್ಯೆ 60,923ಕ್ಕೆ ಏರಿಕೆಯಾಗಿದೆ.ಕರಡು ಮತದಾರರ ಪಟ್ಟಿ ಪ್ರಕಟಿಸಿದ ಬಳಿಕ ಸ್ವೀಕರಿಸಲಾದ ಹಕ್ಕುಗಳು, ಆಕ್ಷೇಪಣೆಗಳು ಹಾಗೂ ನೋಟಿಸ್‌ಗಳ ವಿಲೇವಾರಿ ಪ್ರಕ್ರಿಯೆ ಗುರುವಾರ ಪೂರ್ಣಗೊಂಡಿದೆ. ಪ್ರಸ್ತುತ ಮತದಾರರ ಪಟ್ಟಿಗಳನ್ನು ತಾತ್ಕಾಲಿಕವಾಗಿ ಲಾಕ್ ಮಾಡಲಾಗಿದೆ. ಕರಡು ಪಟ್ಟಿ ಪ್ರಕಟವಾದ ನಂತರ ಸ್ವೀಕರಿಸಿದ ಹೆಸರು ಸೇರ್ಪಡೆ, ತೆಗೆದುಹಾಕುವಿಕೆ ಮತ್ತು ತಿದ್ದುಪಡಿಗಳ ವಿವರಗಳನ್ನು ಪೂರಕ ಪಟ್ಟಿಯಲ್ಲಿ ಕ್ರೋಡೀಕರಿಸಲಾಗುತ್ತಿದೆ.

## ಅಂತರಂಗ ಕಲಾ ಪ್ರದರ್ಶನಕ್ಕೆ ಚಾಲನೆ

**ಬೆಂಗಳೂರು:** ನಗರದ ದ್ವಿಜಾ ಆರ್ಟ್ ಗ್ಯಾಲರಿಯಲ್ಲಿ ಅಂತರಂಗ – ದಿ ನೆಸ್ಟೆಡ್ ಸ್ಟೋರೀಸ್ ಎಂಬ ವಿಶಿಷ್ಟ ಕಲಾ ಪ್ರದರ್ಶನಕ್ಕೆ ಚಾಲನೆ ನೀಡಲಾಗಿದೆ. ಅ.25ರವರೆಗೆ ಪ್ರದರ್ಶನ ನಡೆಯಲಿದೆ.

ಕಲಾವಿದರಾದ ಶಶ್ವತಿ ದೇವಶರ್ಮಾ ಮತ್ತು ನಂದಿನಿ ಬಜೇಕಲ್ ಅವರ ಕಲಾಕೃತಿಗಳನ್ನು ಒಳಗೊಂಡಿರುವ ಈ ಪ್ರದರ್ಶನವು ಭೂದೃಶ್ಯ, ನೆನಪು, ಭಾವನೆ ಮತ್ತು ಮಾನವ ಪ್ರಜ್ಞೆಯ ಆಂತರಿಕ ಆಯಾಮಗಳನ್ನು ಕಲೆಯ ಮೂಲಕ ಅನಾವರಣಗೊಳಿಸಲಿದೆ. 'ಅಂತರಂಗ' ಎಂಬ ಪರಿಕಲ್ಪನೆಯು ಬಾಹ್ಯ ಜಗತ್ತಿನ ದೃಶ್ಯಗಳ ಆಚೆಗೆ ಅಡಗಿರುವ ಮಾನಸಿಕ ಮತ್ತು ಭಾವನಾತ್ಮಕ ಅನುಭವಗಳನ್ನು ಅನ್ವೇಷಿಸುವ ಪ್ರಯತ್ನವಾಗಿದೆ. ಪ್ರತಿಯೊಂದು ಚಿತ್ರದಲ್ಲೂ ಮತ್ತೊಂದು ಕಥೆ, ಪ್ರತಿಯೊಂದು ನೆನಪಿನಲ್ಲೂ ಮತ್ತೊಂದು ನೆನಪು ಅಡಗಿರುತ್ತದೆ ಎಂಬ ಆಶಯದೊಂದಿಗೆ ಈ ಪ್ರದರ್ಶನ ರೂಪುಗೊಂಡಿದೆ. ಇಲ್ಲಿ ಭೂದೃಶ್ಯಗಳು ಕೇವಲ ಪ್ರಕೃತಿಯ ಚಿತ್ರಣವಾಗಿರದೆ, ಮಾನವನ ಭಾವನೆಗಳು, ಕಲ್ಪನೆಗಳು ಮತ್ತು ನೆನಪುಗಳನ್ನು ಪ್ರತಿಬಿಂಬಿಸುವ ಮಾಧ್ಯಮಗಳಾಗಿವೆ.

ವಾಸ್ತುಶಿಲ್ಪದ ಹಿನ್ನೆಲೆ ಹೊಂದಿರುವ ಶಶ್ವತಿ ದೇವಶರ್ಮಾ ಅವರು ಭಾರತೀಯ ಶಾಸ್ತ್ರೀಯ ನೃತ್ಯ, ಸಂಗೀತ, ಕಾವ್ಯ ಮತ್ತು ಪ್ರಕೃತಿಯಿಂದ ಪ್ರೇರಣೆ ಪಡೆದು ಕಲಾಕೃತಿಗಳನ್ನು ರಚಿಸುತ್ತಾರೆ. ಅವರ ಅಮೂರ್ತ ಮಿಶ್ರ ಮಾಧ್ಯಮದ ಚಿತ್ರಗಳಲ್ಲಿ ಕ್ರಮ ಮತ್ತು ಅಕ್ರಮ, ರಚನೆ ಮತ್ತು ಸ್ವಾಭಾವಿಕತೆ, ಬಣ್ಣ ಮತ್ತು ಖಾಲಿ ಜಾಗಗಳ ನಡುವಿನ ಸಂಬಂಧವನ್ನು ವಿಭಿನ್ನವಾಗಿ ಅಭಿವ್ಯಕ್ತಿಸಲಾಗಿದೆ. ನಗರ ಮತ್ತು ಗ್ರಾಮೀಣ ಪರಿಸರದ ದೃಶ್ಯಗಳನ್ನು ಅವರು ಭಾವನಾತ್ಮಕ ಅನುಭವಗಳ ರೂಪದಲ್ಲಿ ಚಿತ್ರಿಸುತ್ತಾರೆ.



---

600ಕ್ಕೂ ಹೆಚ್ಚು ಮಂದಿ ಬಾಕಿ | ಸುರಕ್ಷಿತವಾಗಿ ರಾಜ್ಯಕ್ಕೆ ಕರೆತರಲು ಕೋರಿ ಜಯಶಂಕರ್‌ಗೆ ಡಿಕೆಶಿ ಪತ್ರ

## ಸೌದಿಯಲ್ಲಿರುವ ಕನ್ನಡಿಗ ಉಮ್ರಾ ಯಾತ್ರಿಕರ ರಕ್ಷಣೆಗೆ ಬದ್ಧ

**ಬೆಂಗಳೂರು:** ಸೌದಿ ಅರೇಬಿಯಾದ ಮಕ್ಕಾ ಮತ್ತು ಮದೀನಾದಲ್ಲಿ ಸಿಲುಕಿರುವ 600ಕ್ಕೂ ಹೆಚ್ಚು ಕರ್ನಾಟಕದ ಉಮ್ರಾ ಯಾತ್ರಿಕರ ಸುರಕ್ಷಿತ ಮತ್ತು ಶೀಘ್ರ ವಾಪಸಾತಿಗೆ ತುರ್ತು ಮಧ್ಯಪ್ರವೇಶಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರಿಗೆ ಪತ್ರ ಬರೆದಿದ್ದಾರೆ.

ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಭದ್ರತಾ ಪರಿಸ್ಥಿತಿಯ ನಡುವೆ ಬೆಂಗಳೂರು ಮತ್ತು ಭಾರತದ ಇತರ ಭಾಗಗಳಿಗೆ ಹಿಂದಿರುಗುವ ವಿಮಾನಗಳನ್ನು ಸ್ಥಗಿತಗೊಳಿಸಿರುವ ಹಿನ್ನೆಲೆಯಲ್ಲಿ, ಪವಿತ್ರ ನಗರಗಳಾದ ಮಕ್ಕಾ ಮತ್ತು ಮದೀನಾದಲ್ಲಿ ಸಿಲುಕಿರುವ ಕರ್ನಾಟಕದ 600ಕ್ಕೂ ಹೆಚ್ಚು ಉಮ್ರಾ ಯಾತ್ರಿಕರು ಎದುರಿಸುತ್ತಿರುವ ಕಠಿಣ ಪರಿಸ್ಥಿತಿಯ ಬಗ್ಗೆ ತಮ್ಮ ತುರ್ತು ಗಮನ ಸೆಳೆಯಲು ಬಯಸುತ್ತೇನೆ. ಇತ್ತೀಚೆಗೆ ಪವಿತ್ರ ನಗರಗಳಿಗೆ ಭೇಟಿ ನೀಡಿದ ಕರ್ನಾಟಕ ರಾಜ್ಯ ಹಜ್ ಸಮಿತಿಯ ಅಧ್ಯಕ್ಷರು ಮತ್ತು ಅವರ ತಂಡ, ವಿಮಾನ ಸೇವೆಗಳ ಅಡಚಣೆಯಿಂದಾಗಿ ಹಲವಾರು ಯಾತ್ರಿಕರು ತೀವ್ರ ಸಂಕಷ್ಟವನ್ನು ಎದುರಿಸುತ್ತಿದ್ದಾರೆ ಎಂದು ವರದಿ ಮಾಡಿದ್ದಾರೆ. ಅನೇಕರು ತಮ್ಮ ಆರ್ಥಿಕ ಸಂಪನ್ಮೂಲಗಳನ್ನು ಖಾಲಿ ಮಾಡಿಕೊಂಡಿದ್ದು, ಆಹಾರ ಮತ್ತು ವಸತಿ ಸೇರಿದಂತೆ ಮೂಲ ಭೂತ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ. ಹೋಟೆಲ್‌ಗಳು ಯಾತ್ರಿಕರಿಗೆ ಕೊಠಡಿಗಳನ್ನು ಖಾಲಿ ಮಾಡುವಂತೆ ಕೇಳುತ್ತಿದ್ದು, ವೃದ್ಧರು, ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಅನೇಕರು ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಭಾರತೀಯ ಮತ್ತು ಕರ್ನಾಟಕದ ಸ್ವಯಂಸೇವಾ ಸಂಸ್ಥೆಗಳು ನೀಡುತ್ತಿರುವ ತಾತ್ಕಾಲಿಕ ಸಹಾಯವು ಪೀಡಿತರ ಅಗತ್ಯಗಳನ್ನು ಪೂರೈಸಲು ಸಾಕಾಗುತ್ತಿಲ್ಲ ಎಂದರು.

ಮಾನವೀಯ ತುರ್ತು ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ರಿಯಾದ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಮತ್ತು ಜೆಡ್ಡಾದಲ್ಲಿರುವ ಭಾರತದ ಕಾನ್ಸುಲೇಟ್ ಜನರಲ್ ಅವರು ಸಂಬಂಧಪಟ್ಟ ಸೌದಿ ಅರೇಬಿಯಾ ಅಧಿಕಾರಿಗಳು, ವಿಮಾನಯಾನ ಸಂಸ್ಥೆಗಳು ಮತ್ತು ಇತರ ಸಂಬಂಧಿತ ಏಜೆನ್ಸಿಗಳೊಂದಿಗೆ ಸಮನ್ವಯ ಸಾಧಿಸಿ, ಪರಿಸ್ಥಿತಿಯನ್ನು ನಿರ್ಣಯಿಸಿ ಮತ್ತು ಸಿಲುಕಿರುವ ಯಾತ್ರಿಕರ ಸುರಕ್ಷಿತ ವಾಪಸಾತಿಗೆ ತುರ್ತು ವ್ಯವಸ್ಥೆ ಮಾಡುವಂತೆ ನೋಡಿಕೊಳ್ಳಲು ನಿಮ್ಮ ತಕ್ಷಣದ ಮಧ್ಯಪ್ರವೇಶವನ್ನು ಕೋರುತ್ತೇನೆ.ಅಗತ್ಯವಿರುವ ಕಡೆಗಳಲ್ಲಿ ವಿಶೇಷ ವಿಮಾನಗಳ ವ್ಯವಸ್ಥೆಗೆ ಸಚಿವಾಲಯವು ಅನುಕೂಲ ಮಾಡಿಕೊಡಬೇಕು ಎಂದು ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

### ಸುರಕ್ಷತೆಯ ಬಗ್ಗೆ ನಮ್ಮ ಸರಕಾರ ವಿಶೇಷ ಗಮನ

**ಸೌದಿ ಅರೇಬಿಯಾದಲ್ಲಿ ಪ್ರಸ್ತುತ ಉಂಟಾಗಿರುವ ಪರಿಸ್ಥಿತಿ ಹಾಗೂ ಅಂತಾರಾಷ್ಟ್ರೀಯ ವಿಮಾನಗಳ ಹಾರಾಟದಲ್ಲಿ ವ್ಯತ್ಯಯ ಉಂಟಾಗಿರುವ ಹಿನ್ನೆಲೆಯಲ್ಲಿ, ಅಲ್ಲಿ ನೆಲೆಸಿರುವ ಕನ್ನಡಿಗರು, ವಿಮಾನಗಳ ಹಾರಾಟ ರದ್ದಾಗಿರುವ ಕಾರಣದಿಂದ ಸಂಕಷ್ಟಕ್ಕೆ ಸಿಲುಕಿರುವ ಕರ್ನಾಟಕ ಮೂಲದ ಪ್ರಯಾಣಿಕರು ಹಾಗೂ ರಾಜ್ಯದಿಂದ ಸೌದಿ ಅರೇಬಿಯಾಕ್ಕೆ ಪ್ರಯಾಣಿಸಲು ಉದ್ದೇಶಿಸಿರುವವರ ಸುರಕ್ಷತೆಯ ಬಗ್ಗೆ ನಮ್ಮ ಸರಕಾರ ವಿಶೇಷ ಗಮನಹರಿಸಿದೆ. ಕರ್ನಾಟಕದಿಂದ ಸೌದಿ ಅರೇಬಿಯಾಕ್ಕೆ, ವಿಶೇಷವಾಗಿ ಉಮ್ರಾ ಯಾತ್ರೆಗೆ ತೆರಳಲು ಉದ್ದೇಶಿಸಿರುವವರು ಪ್ರಸ್ತುತ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಹೆಚ್ಚಿನ ಎಚ್ಚರಿಕೆ ವಹಿಸಬೇಕು. ಭಾರತೀಯ ರಾಯಭಾರ ಕಚೇರಿ ಹೊರಡಿಸುವ ಸಲಹೆ ಮತ್ತು ಸೂಚನೆ ಗಮನಿಸುತ್ತಿರಬೇಕು. ತಮ್ಮ ವಿಮಾನಯಾನ ಸಂಸ್ಥೆಗಳು ಹಾಗೂ ಪ್ರವಾಸ ಆಯೋಜಕರಿಂದ ವಿಮಾನಗಳ ವೇಳಾಪಟ್ಟಿ ಖಚಿತಪಡಿಸಿಕೊಂಡು ಪ್ರಯಾಣದ ವ್ಯವಸ್ಥೆ ಮಾಡಿಕೊಳ್ಳಬೇಕು. ಪ್ರಯಾಣಿಸುವ ಸಂದರ್ಭದಲ್ಲಿ ವಿಮಾನಗಳ ಹಠಾತ್ ರದ್ದತಿ, ವಿಳಂಬ ಅಥವಾ ಅನಿವಾರ್ಯವಾಗಿ ಹೆಚ್ಚಿನ ದಿನಗಳ ಕಾಲ ಅಲ್ಲಿಯೇ ಉಳಿಯಬೇಕಾಗುವ ಸಾಧ್ಯತೆಗಳನ್ನೂ ಸಹ ಗಮನದಲ್ಲಿರಿಸಿಕೊಳ್ಳುವಂತೆ ಡಿಸಿಎಂ ಪರಮೇಶ್ವರ್ ಅವರು ಮನವಿ ಮಾಡಿದ್ದಾರೆ.**

---

ಉದ್ಯಮ, ತಂತ್ರಜ್ಞಾನ ಅವಕಾಶಗಳ ಕುರಿತು ಪೋಲೆಂಡ್ ನಿಯೋಗದ ಜತೆ ಸಿಎಂ ಡಿಕೆಶಿ ಚರ್ಚೆ

## ರಾಜ್ಯದ ಇತರ ಜಿಲ್ಲೆಗಳಲ್ಲೂ ಹೂಡಿಕೆ ಆಗಲಿ

**ಬೆಂಗಳೂರು:** ಬೆಂಗಳೂರಿನ ಹೊರತಾಗಿ ರಾಜ್ಯದ ಇತರೆ ಜಿಲ್ಲೆಗಳಲ್ಲೂ ಹೂಡಿಕೆ ಮಾಡಿ ಎಂದು ಸಿಎಂ ಡಿ.ಕೆ.ಶಿವಕುಮಾರ್ ಸ್ವೀಡನ್ ಉದ್ಯಮಿಗಳಿಗೆ ಕರೆ ನೀಡಿದರು.

ಶುಕ್ರವಾರ ವಿಧಾನಸೌಧದ ಕಚೇರಿಯಲ್ಲಿ ಭಾರತದಲ್ಲಿ ಸ್ವೀಡನ್ ರಾಯಭಾರಿ ಪೆಟ್ರಾ ಮೆನಾಂಡರ್ ನೇತೃತ್ವದ ನಿಯೋಗದೊಂದಿಗೆ ಸಿಎಂ ಶಿವಕುಮಾರ್ ಹೂಡಿಕೆ, ಉದ್ಯಮ ಮತ್ತು ತಂತ್ರಜ್ಞಾನ ಅವಕಾಶಗಳ ಕುರಿತು ಚರ್ಚೆ ನಡೆಸಿದರು.

ಈ ಕುರಿತು ಸಿಎಂ ಡಿ.ಕೆ.ಶಿವಕುಮಾರ್, ಬೆಂಗಳೂರಿನ ತಂತ್ರಜ್ಞಾನ ವ್ಯವಸ್ಥೆ ಹಾಗೂ ಸ್ವೀಡನ್‌ನ ಸುಧಾರಿತ ಉತ್ಪಾದನೆ, ಕೃತಕ ಬುದ್ಧಿಮತ್ತೆ ಮತ್ತು ಹಸಿರು ಇಂಧನ ಕ್ಷೇತ್ರದ ಪರಿಣಿತಿಯನ್ನು ಬಳಸಿಕೊಂಡು ಮುನ್ನಡೆಯುವ ಅಗತ್ಯವಿದೆ. ಏಷ್ಯಾ ಬ್ರೌನ್ ಬೋ ವೇರಿ ಸಂಸ್ಥೆಯು ಕರ್ನಾಟಕದಲ್ಲಿ ಮಾಡಲು ಉದ್ದೇಶಿಸಿರುವ ಹೂಡಿಕೆ ಸ್ವಾಗತಾರ್ಹ ಹಾಗೂ ಕರ್ನಾಟಕದಲ್ಲಿ ಸ್ವೀಡಿಷ್ ಉದ್ಯಮಗಳ ಪ್ರಬಲ ಅಸ್ತಿತ್ವವಿದೆ. ವೋಲ್ವೋ ಗ್ರೂಪ್ ಬೆಂಗಳೂರಿನ ಬಳಿ ಉತ್ಪಾದನಾ ಘಟಕ ಹೊಂದಿದ್ದು, ನಗರದಲ್ಲಿ ಪ್ರಮುಖ ತಂತ್ರಜ್ಞಾನ, ಉತ್ಪನ್ನ ಅಭಿವೃದ್ಧಿ ನಾವೀನ್ಯತೆ ಕಾರ್ಯಾಚರಣೆ ನಡೆಸುತ್ತಿದೆ ಎಂದರು.

ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಭಾಗವಹಿಸಿ: ಅಸ್ಟ್ರಾಜೆನೆಕಾ, ಆಟೋಲಿವ್, ಎರಿಕ್ಸನ್, ಹಿಟಾಚಿ ಎನರ್ಜಿ, ಐಕಿಯಾ, ಸೆಕ್ಯುರಿಟಾಸ್, ಟ್ರೆಲ್ಲೆಬೋರ್ಗ್ ಮತ್ತು ವಿಇ ಕಮರ್ಷಿಯಲ್ ವೆಹಿಕಲ್ಸ್ ನಂತಹ ಕಂಪನಿ, ಜೀವ ವಿಜ್ಞಾನ, ವಾಹನ ಸುರಕ್ಷತೆ, ದೂರ ಸಂಪರ್ಕ, ಇಂಧನ ತಂತ್ರಜ್ಞಾನ, ಚಿಲ್ಲರೆ ಮಾರಾಟ ಮತ್ತು ಕೈಗಾರಿಕಾ ಕಾರ್ಯಾಚರಣೆ ವಲಯಗಳಲ್ಲಿ ವಿಸ್ತರಿಸಿವೆ. ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆ ಬಾಂಧವ್ಯ ಬಲಪಡಿಸಲು ವೇದಿಕೆ ಒದಗಿಸುವ ಕರ್ನಾಟಕ ಜಾಗತಿಕ ಹೂಡಿಕೆದಾರರ ಸಮಾವೇಶ 2027ರಲ್ಲಿ ಪಾಲುದಾರ ದೇಶವಾಗಿ ಭಾಗವಹಿಸಿ ಎಂದು ಸಿಎಂ ಡಿ.ಕೆ.ಶಿವಕುಮಾರ್ ಸ್ವೀಡನ್ ಗೆ ಆಹ್ವಾನ ನೀಡಿದರು.



ಸಿಎಂ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ಭಾರತದ ಸ್ವೀಡನ್ ರಾಯಭಾರಿ ಪೆಟ್ರಾ ಮೆನಾಂಡರ್ ನೇತೃತ್ವದ ನಿಯೋಗದೊಂದಿಗೆ ವಿಧಾನಸೌಧದ ತಮ್ಮ ಕಚೇರಿಯಲ್ಲಿ ಶುಕ್ರವಾರ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಈ ವೇಳೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಸೇರಿದಂತೆ ಇನ್ನಿತರರು ಇದ್ದರು.

### ಶೇ.61 ಸ್ವೀಡಿಷ್ ಕಂಪೆನಿಗಳು ಉದ್ಯಮ ವಿಸ್ತರಿಸಲು ಉತ್ಸುಕ

**ಭಾರತದಲ್ಲಿನ ಸ್ವೀಡನ್‌ನ ಒಟ್ಟು ಹೂಡಿಕೆಯಲ್ಲಿ ಶೇ.25 ರಷ್ಟು ಕರ್ನಾಟಕದಲ್ಲಿದ್ದು, ಪ್ರಸ್ತುತ ಇರುವ ಸ್ವೀಡಿಷ್ ಕಂಪನಿಗಳ ಪೈಕಿ ಶೇ.61 ರಷ್ಟು ಕಂಪನಿಗಳು ಕರ್ನಾಟಕದಲ್ಲಿ ತಮ್ಮ ಉದ್ಯಮವನ್ನು ವಿಸ್ತರಿಸಲು ಬಯಸಿವೆ. ಹೆಚ್ಚಿನ ಹೂಡಿಕೆಗಳಿಗಾಗಿ ಕರ್ನಾಟಕ ಮತ್ತು ಸ್ವೀಡನ್ ವಿವಿಧ ವಲಯಗಳಲ್ಲಿ ಸಹಕರಿಸಬಹುದು ಎಂದು ಭಾರತದ ಸ್ವೀಡನ್ ರಾಯಭಾರಿ ಪೆಟ್ರಾ ಮೆನಾಂಡರ್ ತಿಳಿಸಿದರು.**

> ತಂತ್ರಜ್ಞಾನ, ನಾವೀನ್ಯತೆ, ಸ್ಟಾರ್ಟ್‌ಅಪ್ ಮತ್ತು ಉದಯೋನ್ಮುಖ ಕೈಗಾರಿಕೆಗಳಿಗೆ ಕರ್ನಾಟಕ ಪ್ರಮುಖ ತಾಣವಾಗಿ ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ಸ್ವೀಡಿಷ್ ಕಂಪನಿ ಕರ್ನಾಟಕದಲ್ಲಿ ತಮ್ಮ ಹೂಡಿಕೆ ವಿಸ್ತರಿಸಲು ಮತ್ತು ದ್ವಿಪಕ್ಷೀಯ ಆರ್ಥಿಕ ಸಹಕಾರ ಬಲಪಡಿಸಲಾಗುವುದು.
> -ಪ್ರಿಯಾಂಕ್ ಖರ್ಗೆ, ಗೃಹ ಸಚಿವ

## ಗೃಹಜ್ಯೋತಿ ಸಮೀಕ್ಷೆ ಶೇ.98.49ರಷ್ಟು ಪೂರ್ಣ

**ಬೆಂಗಳೂರು:** ಬೆಸ್ಕಾಂ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಗೃಹಜ್ಯೋತಿ ಯೋಜನೆಯ ಫಲಾನುಭವಿಗಳ ಮನೆ-ಮನೆ ಸಮೀಕ್ಷೆ ಅಕ್ಟೋಬರ್ 31ಕ್ಕೆ ಮುಕ್ತಾಯಗೊಳ್ಳಲಿದ್ದು, ಸಮೀಕ್ಷೆಯಲ್ಲಿ ಪಾಲ್ಗೊಳ್ಳದ ಗ್ರಾಹಕರು ನಿಗದಿತ ಗಡುವಿನೊಳಗೆ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಬೆಸ್ಕಾಂ ಮನವಿ ಮಾಡಿದೆ. ಸಮೀಕ್ಷೆಯ ಗಡುವನ್ನು ಯಾವುದೇ ಕಾರಣಕ್ಕೂ ವಿಸ್ತರಿಸುವುದಿಲ್ಲ ಎಂದು ಸ್ಪಷ್ಟಪಡಿಸಿರುವ ಬೆಸ್ಕಾಂ, ದಾಖಲೆ ಸಲ್ಲಿಸಲು ಇದೇ ಕೊನೆಯ ಅವಕಾಶ ಎಂದು ತಿಳಿಸಿದೆ. ಕಳೆದ ಮೂರೂವರೆ ತಿಂಗಳಿನಿಂದ ನಡೆಯುತ್ತಿರುವ ಸಮೀಕ್ಷೆಯಲ್ಲಿ ಮನೆಗೆ ಬೀಗ ಹಾಕಿರುವುದು, ಮನೆ ಖಾಲಿ ಇರುವುದು ಅಥವಾ ಇತರ ಕಾರಣಗಳಿಂದ ಸಮೀಕ್ಷೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದ ಗ್ರಾಹಕರು ತಮ್ಮ ವ್ಯಾಪ್ತಿಯ ಬೆಸ್ಕಾಂ ಉಪವಿಭಾಗ ಕಚೇರಿಗೆ ಖುದ್ದಾಗಿ ತೆರಳಿ ಅಗತ್ಯ ದಾಖಲೆ ಸಲ್ಲಿಸಬಹುದು. ರಾಜ್ಯ ಸರಕಾರ ಈ ಅವಕಾಶ ಕಲ್ಪಿಸಿದ್ದು, ಅ.31ರೊಳಗೆ ದಾಖಲೆ ಸಲ್ಲಿಸುವಂತೆ ಸೂಚಿಸಲಾಗಿದೆ.ಬೆಸ್ಕಾಂನ ಎಂಟು ಜಿಲ್ಲೆಗಳ ವ್ಯಾಪ್ತಿಯಲ್ಲಿ ಭಾಗ್ಯಜ್ಯೋತಿ, ಕುಟೀರಜ್ಯೋತಿ ಹಾಗೂ ಅಮೃತಜ್ಯೋತಿ ಯೋಜನೆಗಳ ಗ್ರಾಹಕರು ಸೇರಿದಂತೆ ಒಟ್ಟು 74,29,773 ಗೃಹಜ್ಯೋತಿ ಫಲಾನುಭವಿಗಳಿದ್ದಾರೆ. ಈ ಪೈಕಿ ಅಕ್ಟೋಬರ್ 22ರ ವೇಳೆಗೆ 73,17,687 ಗ್ರಾಹಕರ ಸಮೀಕ್ಷೆ ಪೂರ್ಣಗೊಂಡಿದ್ದು, ಶೇ.98.49ರಷ್ಟು ಪ್ರಗತಿ ಸಾಧಿಸಲಾಗಿದೆ. ಸಮೀಕ್ಷೆಯ ಸಂದರ್ಭದಲ್ಲಿ ಬೀಗ ಹಾಕಿರುವ ಹಾಗೂ ಖಾಲಿ ಇರುವ ಮನೆಗಳಿಗೆ ಬೆಸ್ಕಾಂ ಸಿಬ್ಬಂದಿ ಮೂರು ಬಾರಿ ಭೇಟಿ ನೀಡಿದ್ದಾರೆ. ಅಲ್ಲದೆ, ಸಮೀಕ್ಷೆಯಲ್ಲಿ ಪಾಲ್ಗೊಳ್ಳುವಂತೆ ಸಂಬಂಧಪಟ್ಟ ಗ್ರಾಹಕರ ಮೊಬೈಲ್ ಸಂಖ್ಯೆಗಳಿಗೂ ಸಂದೇಶ ಕಳುಹಿಸಲಾಗಿದೆ. ಇಷ್ಟಾದರೂ ಸಮೀಕ್ಷೆ ಪೂರ್ಣಗೊಳ್ಳದ ಹಿನ್ನೆಲೆಅಂತಹ ಗ್ರಾಹಕರು ಅಕ್ಟೋಬರ್ 31ರೊಳಗೆ ಬೆಸ್ಕಾಂ ಉಪವಿಭಾಗ ಕಚೇರಿಗೆ ತೆರಳಿ ದಾಖಲೆ ಸಲ್ಲಿಸಬೇಕು. ಗಡುವು ಮುಗಿದ ಬಳಿಕ ಮತ್ತೆ ಅವಕಾಶ ನೀಡಲಾಗುವುದಿಲ್ಲ ಎಂದು ಬೆಸ್ಕಾಂ ತಿಳಿಸಿದೆ.

TRUALT BIOENERGY

TRUALT BIOENERGY LIMITED

One of India's Largest Biofuels Producers(*)

Registered Address: Survey No. 166, Kulali Cross, Jamkhandi Mudhol Road, Bagalkot, Karnataka, India - 587313
Corporate Address: Unit No. N-1501, 15th Floor, World Trade Centre, Brigade Gateway Campus, Rajajinagar, Bangalore - 560055
Tel: +91 80 2325 5000 | Email: ir@trualtbioenergy.com | Website: www.trualtbioenergy.com

Corporate Identity Number: L15400KA2021PLC145978



STATEMENT OF UNAUDITED FINANCIAL RESULTS AND LIMITED REVIEW REPORT (STANDALONE AND CONSOLIDATED) FOR THE QUARTER AND HALF YEAR ENDED SEPTEMBER 30, 2026

The Board of Directors of the Company, at the meeting held on Friday, October 23, 2026, approved the Unaudited Financial Results (Standalone and Consolidated) and Limited Review Report of the Company for the Quarter and Half year ended on September 30, 2026 ("Financial Results")

The Financial Results along with Limited Review Report has been hosted on the Company website at www.trualtbioenergy.com/investor-relations and can be accessed by scanning the QR code below

For and on behalf of the Board of Directors
TruAlt Bioenergy Limited
Sd/-
Vijaykumar Murugesh Nirani
Managing Director
(DIN: 07413777)

Date : October 23, 2026
Place : Bangalore

(*) Source: CRISIL Report